ಸದನದಲ್ಲಿ ಉತ್ತರಿಸುವ

# ಕರ್ನಾಟಕ ವಿಧಾನ ಪರಿಷತ್ತು

ನೂರ ಮೂವತ್ತೆಂಟನೆಯ ಅಧಿವೇಶನ

ಗುರುವಾರ,ದಿನಾಂಕ : 25ನೇ ಜುಲೈ, 2019

15.ಧಾರ್ಮಿಕ ಕೈಗಾರಿಕೆ ಎಂಬುದರ ಕುರಿತು

ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) -

135 (628) ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ-

(ಅ) ಧಾರ್ಮಿಕ ಕೈಗಾರಿಕೆ ಎಂದರೇನು ; ರಾಜ್ಯದಲ್ಲಿ ಇದುವರೆಗೆ ಧಾರ್ಮಿಕ ಕೈಗಾರಿಕೆಗೆಂದು ಎಷ್ಟು ಎಕರೆ ಭೂಮಿಯನ್ನು ಕೆ.ಐ..ಡಿ.ಬಿ. ಮುಖಾಂತರ ಉದ್ಯಮಿಗಳಿಗೆ ಗುತ್ತಿಗೆ/ಮಾರಾಟದ ಮೂಲಕ ವಿತರಿಸಲಾಗಿದೆ ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಯಾವ ಉದ್ದೇಶಕ್ಕೆ ಕೆ.ಐ.ಡಿ.ಬಿ. ಮುಖಾಂತರ ಉದ್ಯಮಿಗಳಿಗೆ ಗುತ್ತಿಗೆ/ಮಾರಾಟದ ಮೂಲಕ ವಿತರಿಸಲಾಗಿದೆಯೋ ಆ ಉದ್ದೇಶಕ್ಕೆ ಬಳಸಿಕೊಳ್ಳದ ಎಷ್ಟು ಎಕರೆ ಭೂಮಿಯನ್ನು ಕೆ.ಐ.ಡಿ.ಬಿ. ಹಿಂದಕ್ಕೆ ಪಡೆದುಕೊಳ್ಳಲಾಗಿದೆ ; (ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ಬೆಂಗಳೂರು ದಕ್ಷಿಣ ತಾಲ್ಲೂಕು ಉತ್ತರಹಳ್ಳಿ ಹೋಬಳಿ ದೊಡ್ಡಕಲ್ಲಸಂದ್ರ ಗ್ರಾಮದ ಸರ್ವೆ ನಂ. 55/1(ಪಿ), 55/2(ಪಿ), 56,57,58,59(ಪಿ) ಮತ್ತು 60(ಪಿ) ಯಲ್ಲಿನ 24 ಎಕರೆ ಜಾಗವನ್ನು ಯಾವ ಉದ್ದೇಶಕ್ಕಾಗಿ ಯಾರಿಗೆ ಕೆ.ಐ.ಡಿ.ಬಿ. ಮುಖಾಂತರ ವಿತರಿಸಲಾಗಿತ್ತು ;

(ಈ) ಪ್ರಸ್ತುತ ಆ ಜಾಗದಲ್ಲಿ ಯಾವ ಕೈಗಾರಿಕೆ ಪ್ರಾರಂಭಗೊಂಡಿದೆ ; ಇದರಿಂದ ಎಷ್ಟು ಕನ್ನಡಿಗರಿಗೆ ಉದ್ಯೋಗ ದೊರೆತಿದೆ ; ಈ ಕೈಗಾರಿಕೆಯ ಉತ್ಪನ್ನಗಳೇನು;

(ಉ) ಸದರಿ ಜಾಗವನ್ನು ನೀಡಿರುವ ಉದ್ದೇಶಕ್ಕೆ ಬಳಸಿಕೊಳ್ಳದಿದ್ದಲ್ಲಿ ಆ ಜಾಗವನ್ನು ಕೆ.ಐ.ಡಿ.ಬಿ. ಹಿಂದಕ್ಕೆ ಪಡೆದುಕೊಳ್ಳಲು ಯಾವ ಕ್ರಮ ಕೈಗೊಂಡಿದೆ ; ಈ ಕುರಿತು ಯಾವಾಗ ನೋಟೀಸ್ ನೀಡಲಾಗಿದೆ ?